

ಮಧ್ಯಾಹ್ನ ಸೂರ್ಯ ಮತ್ತೆ ಕಾಣಿಸಿಕೊಂಡ, ನಮ್ಮ ಮೈಮನಸ್ಸುಗಳನ್ನು ತುಂಬಿಕೊಂಡಿದ್ದ ಖುಷಿ ಆ ಸೂರ್ಯನಿಗೆ ತಿಳಿದಿರಲಿಲ್ಲ. ಸಂತೋಷದಿಂದಲೇ ಉಸಿರು ಕಟ್ಟಿಸುವಂತಿದ್ದ ಆ ಬಿಸಿ-ಒದ್ದೆ ಸುರುಳಿ ಸುರುಳಿ ಹಬೆಯ ನಡುವೆ 'ಅಂಥ' ವಿಷಯವನ್ನು ಕುರಿತು ಯೋಚಿಸುವ ಶಕ್ತಿಯಾದರೂ ನನಗೆ ಇತ್ತೆಂದು ನಿಮಗೆ ಅನ್ನಿಸುತ್ತದೆಯೇ? ನರಕದಂತಹ ಆ ಸೆಕೆ ಮತ್ತು ಕಿವಿ ಗಡಚಿಕ್ಕುವ ಪಟಾಕಿ ಶಬ್ದಗಳ ಮಾರುಕಟ್ಟೆಯಲ್ಲಿ ಜುಡಾಸ್‌ನ ಕಾಗದದ ತಿರುಳಿನ ಪ್ರತಿಮೆಗಳು ಸಾವಿರಾರು ಚೂರುಗಳಾಗಿ ಸಿಡಿದು ಹೋದವು. ಕೆಟ್ಟತನವೇ ಹೊಗೆಯಾಗಿ ಮುಗಿಲಿನಲ್ಲಿ ಮರೆಯಾಯಿತು. ಆ ಶುಭಕ್ಕಾಗಿ ಊರಿನ ಜನ ಆನಂದದಿಂದ ಸಂಭ್ರಮಿಸಿದರು.

ಸಂಜೆ ಐದು ಗಂಟೆಗೆ ಪಟಾಕಿಗಳ ಮೊರೆತ ಇನ್ನಷ್ಟು ಜಾಸ್ತಿಯಾಯಿತು. ಹಬ್ಬದ ಆಚರಣೆ ಮೊದಲಾಯಿತು. ನಾನು ಮಾರ್ಕೆಟ್ ಕಡೆ ಓಡಿದೆ. ಬಾಳೆಹಣ್ಣು ಮತ್ತು ಮಾವಿನಹಣ್ಣುಗಳ ರಾಶಿಯ ಸುತ್ತ, ಕಲ್ಲಂಗಡಿ ಹಣ್ಣನ್ನು ಒಪ್ಪವಾಗಿ ಜೋಡಿಸಿದ ಅಟ್ಟಣೆಗಳ ಸುತ್ತ ಅಂತೆಯೇ ಮಣ್ಣಿನ ಮಡಕೆ ವ್ಯಾಪಾರ ಮಾಡುತ್ತಾ ಜನರು ಖುಷಿಯಿಂದ ಕುಣಿಯುವುದನ್ನು ನೋಡಲೆಂದೇ ಹೋದೆ. ಮಳೆಯಲ್ಲಿ ತೊಳೆದ ಎಲೆಗಳಂತೆ ಅಲ್ಲಿ ಬಗೆಬಗೆಯ ಬಣ್ಣಗಳು ಹೊಳೆಯುತ್ತಿದ್ದವು. ಶ್ರೀಮಂತರಂತೆ ಪೋಷಾಕು ಧರಿಸಿದ್ದ ಊರ ಜನರ ಸಂತೋಷ-ಸಂಭ್ರಮಗಳಲ್ಲಿ ನಾನು ಇನ್ನೇನು ಸೇರಿಕೊಳ್ಳುವವನಿದ್ದೆ.; ವೆಲ್ವೆಟ್ ನಿಲುವಂಗಿಗಳು; ಚೆನ್ನಾಗಿ ಕಸೂತಿ ಹಾಕಿದ ದೊಡ್ಡದೊಡ್ಡ ಬಣ್ಣದ ಟೋಪಿಗಳು; ಕುಚ್ಚು ಕಟ್ಟಿದ ಸುನೇರಿ ಅಂಟಿಸಿದ ಶೋಕಿ ಉಡುಪು; ಬಿಳಿಯರ ಮುಖವಾಡಗಳು; ಚೂಪುಚೂಪು ಗಡ್ಡ, ಬಿಳಿಯ ಕೈಗವಸು. ನಾನೂ ಅವರ ಜೊತೆ ಮಜ ಮಾಡಲು ಬಯಸಿದ್ದೆ, ಕಂಚುದನಿಯ ಸಂಗೀತದಲ್ಲಿ ಸೇರಿಕೊಳ್ಳಲು ಇಚ್ಛಿಸಿದ್ದೆ. ಜನರೊಡನೆ ಕರಗಿ ಹೋಗಲು ಆಸೆ ಪಟ್ಟಿದ್ದೆ, ಇಷ್ಟೆಲ್ಲಾ ಆ ನಾಯೀಮಗ, ನೀರು ಹಂಚೋ ನೀಲಿ ಮನುಷ್ಯನ್ನ ನೋಡೋ ತನಕ ಮಾತ್ರ.

ಅವನು ಮಾರುಕಟ್ಟೆಯ ಮಧ್ಯದ ಕಾರಂಜಿಕಟ್ಟೆ ಮೇಲೆ ನಿಂತಿದ್ದ. ನಾನು ಅವನನ್ನು ಹಿಂಬದಿಯಿಂದ ನೋಡಿದೆ. ಅವನ ಕಣ್ಣುಗಳು ಯಾರನ್ನೋ ಹುಡುಕುತ್ತಿದ್ದವು. (ಇನ್ನಾರನ್ನು? ನನ್ನನ್ನೇ ಇರಬೇಕು. ಅನುಮಾನವಿಲ್ಲ.) ಅವನು ಸಂಪೂರ್ಣವಾಗಿ ನೀಲಿಪೋಷಾಕು ತೊಟ್ಟಿದ್ದ. ಒಣಗಿ ಹೋದ ಕಾರಂಜಿಯ ಮೇಲೆ ನೀಲಿಯೋ ನೀಲಿ – ನೀರು ಹಂಚುವ ಮನುಷ್ಯ. ಯಾಕೋ ನನಗೆ ತಡ್ಕೊಳ್ಳೋಕೆ ಆಗಲಿಲ್ಲ, ನನ್ನ ಕೆಲಸ ಇನ್ನೂ ಮುಗಿದಿರಲಿಲ್ಲವಾದರೂ– ಎಡಗೈ, ಮುಖ ಮತ್ತು ಒಂದು ತೊರಡು ಬೀಜ– ನನಗೆ ಅಲ್ಲಿರೋಕೆ ಆಗದೆ ಗಾಬರಿಯಲ್ಲಿ ಓಡಿದೆ. ಜನ ನಾನು ಓಡಿಹೋಗುವುದನ್ನು ಮುಖವಾಡಗಳ ಮರೆಯಿಂದ ಗಮನಿಸಿದರು. ನಿರ್ಭಾವುಕವಾದ ಮುಖಗಳು, ಮುಖವಾಡಗಳಿಂದ ದಿಟ್ಟಿಸುವ ಕಣ್ಣುಗಳು ನನ್ನ ಪಲಾಯನವನ್ನು ಗಮನಿಸಿದವು. ಎಲ್ಲರಿಗಿಂತ ಎತ್ತರದಲ್ಲಿ ಅವನು, ಅಷ್ಟೊಂದು ನೀಲಿಯ, ಯಾರಿಗೂ ಕೇರ್ ಮಾಡದ, ಯಾರಿಗೂ ಗೌರವ ತೋರಿಸದ ಅವನು. ನನ್ನ ಹತ್ತಿರ ಉಳಿದಿದ್ದ ಕಟ್ಟಕಡೆಯ ನಾಣ್ಯಗಳಿಂದ ಬಿಳೀ ಬಣ್ಣ ಕೊಂಡುಕೊಂಡೆ. (ಹಸಿವಿಗಿಂತ ಹೆಚ್ಚು ತಗಾದೆ ಮಾಡೋದು ಮನೆ. ನನಗೆ ನೀರುಮನುಷ್ಯನ